ನಿವೇದನೆ

# ಮುಟ್ಟು ಹುಟ್ಟುಗಳ ನಡುವೆ

ಹದಿಹರೆಯದಲ್ಲೇ ಮಕ್ಕಳಿಗೆ ಋತುಸ್ರಾವದ ಬಗ್ಗೆ ಜಾಗೃತಿ ಮೂಡಿಸಬೇಕೆಂದರೆ ಅದು ಪಠ್ಯರೂಪದಲ್ಲಿ ಅವರಿಗೆ ಪರಿಚಯವಾಗಬೇಕು. ಆಗಲೇ ಅವರು ಪ್ರಾಕೃತಿಕವಾಗಿ, ದೈಹಿಕವಾಗಿ ಭಿನ್ನವಾಗಿರುವುದನ್ನ ಅರಿತುಕೊಳ್ಳುತ್ತಾರೆ. ಋತುಚಕ್ರ ಹುಡುಗರಿಂದ ಮುಚ್ಚಿಡಬೇಕಾದ ವಿಷಯವಲ್ಲ, ಸಹಜವಾದುದು ಎಂಬುದನ್ನು ಎಲ್ಲರೂ ಅರ್ಥಮಾಡಿಕೊಳ್ಳಬೇಕಿದೆ.

ಮುಟ್ಟು ಕಂಡವಳನ್ನು | ಮುಟ್ಟಲೊಲ್ಲರು ನೋಡ |
ಮುಟ್ಟು ತಾ ಪಡೆದು, ಹುಟ್ಟಿದಾ ದೇಹವನು |
ಮುಟ್ಟುತಿಹರೇಕೆ ಸರ್ವಜ್ಞ ||

ಈ ತ್ರಿಪದಿಯೊಂದು ಬಾಯಿಪಾಠವಾಗಬೇಕು. ಮುಟ್ಟಿಗೆ ಸಂಬಂಧಿಸಿದ ಮೌಢ್ಯಗಳನ್ನು ನೋಡಿದಾಗಲೆಲ್ಲ ಈ ತ್ರಿಪದಿ ನೆನಪಾಗುತ್ತಲೇ ಇರುತ್ತದೆ. ಶಾಲೆಗಳಲ್ಲಿಯೇ ಮೌಢ್ಯ ಬೆಳೆಸುವುದು ಶೋಚನೀಯ.

ಮುಟ್ಟಾದ ವಿದ್ಯಾರ್ಥಿನಿ ಸ್ಯಾನಿಟರಿ ಪ್ಯಾಡ್ ಕೇಳಿದ್ದಕ್ಕೆ ಬರೇಲಿಯಲ್ಲಿ ಹೊರ ನಿಲ್ಲಿಸಿದ್ದರು. ಉತ್ತರಪ್ರದೇಶದಂತಹ (**BIMARU:** ಬಿಹಾರ್, ಮಧ್ಯಪ್ರದೇಶ, ಆಂಧ್ರ, ರಾಜಸ್ಥಾನ ಮತ್ತು ಉತ್ತರಪ್ರದೇಶಗಳನ್ನು ದೇಶದ ಅತಿ ಹಿಂದುಳಿದ ರಾಜ್ಯಗಳೆಂದು ಪರಿಗಣಿಸಲಾಗಿದೆ. ಈ ರಾಜ್ಯಗಳನ್ನು ಒಟ್ಟಾಗಿ ಬಿಮಾರು ರಾಜ್ಯಗಳೆಂದೇ ಗುರುತಿಸಲಾಗುತ್ತದೆ.) ಬಿಮಾರಿ (ರೋಗಗ್ರಸ್ತ) ಇರುವ ರಾಜ್ಯದಲ್ಲಿ ಇಂಥ ಘಟನೆ ನಡೆಯುವುದು ಸಹಜವಿರಬಹುದು. ಆದರೆ ಅತಿ ಅಕ್ಷರಸ್ಥರ ರಾಜ್ಯವಾದ ತಮಿಳುನಾಡಿನಲ್ಲಿಯೂ ಬೇರೆ ಕೊಠಡಿಯಲ್ಲಿ ಪ್ರತ್ಯೇಕವಾಗಿ ಕೂರಿಸಿ ಪರೀಕ್ಷೆ ಬರೆಯಿಸಿದ್ದರು. ಪ್ರತ್ಯೇಕವಾಗಿರಿಸುವುದು, ಹೊರ ನಿಲ್ಲಿಸುವುದು, ದೂರ ಕೂರಿಸುವುದು ಇವೆಲ್ಲವೂ ಒಂದು ಬಗೆಯ ಕ್ರೌರ್ಯವೇ.

ಶೌಚಕ್ಕೆ ಹೋದ ವಿದ್ಯಾರ್ಥಿನಿಯರಲ್ಲಿ ರಕ್ತಸ್ರಾವ ಆಗಿದ್ದು ಯಾರಿಗೆ ಎಂದು ಶಿಕ್ಷಕಿಯರು ಎಲ್ಲರನ್ನೂ ಪರಿಶೀಲಿಸಿದ ಘಟನೆಯೂ ಇತ್ತೀಚೆಗೆ ನಡೆದಿದೆ.

ಮುಟ್ಟೆಂಬುದು ಮಡಿಹುಡಿ ಮಾಡುವಂಥ ಸಂದರ್ಭ ಅಲ್ಲ. ಅದೊಂದು ಜೈವಿಕ ಚಟುವಟಿಕೆ. ಇದರಿಂದಾಗಿ ಸಾಮಾಜಿಕ ಸ್ವಾಸ್ಥ್ಯಕ್ಕೆ ಯಾವ ತೊಂದರೆಯೂ ಇಲ್ಲ. ಆದರೆ ಇದನ್ನು ಹೇಳಬೇಕಾದ ಶಿಕ್ಷಣ ಸಂಸ್ಥೆಗಳೇ ಹೆಣ್ಣುಮಕ್ಕಳನ್ನು ಆಚೆ ನಿಲ್ಲಿಸುವುದು, ಪ್ರತ್ಯೇಕವಾಗಿಸುತ್ತಿರುವುದು ಆಘಾತಕಾರಿಯಾಗಿದೆ.

ಹದಿಹರೆಯದ ಮಾನಸಿಕ ತುಮುಲಗಳೇ ಅಧಿಕ. ಅಂಥದ್ರಲ್ಲಿ ಈ ಅವಮಾನವನ್ನು ಆ ಪುಟ್ತಾಯಂದಿರು ಅದ್ಹೇಗೆ ಸಹಿಸಿದರೋ? ಹದಿಮೂರು–ಹದಿನಾಲ್ಕು ವರ್ಷಗಳಿಂದ ಇದೀಗ ಋತುಮತಿಯಾಗುವ ವಯಸ್ಸು ಹತ್ತು–ಹನ್ನೊಂದಕ್ಕೆ ಇಳಿದಿದೆ. ತನ್ನ ದೇಹದಲ್ಲಾಗುವ ಬದಲಾವಣೆಗಳನ್ನು ಗಮನಿಸುವುದನ್ನು ಕಲಿಯುವಾಗಲೇ ಋತುಸ್ರಾವ ಈ ಮಕ್ಕಳನ್ನು ಹಿಂಡಿಹಿಪ್ಪೆ ಮಾಡುತ್ತದೆ. ಪ್ರಿ ಮೆನ್ಸ್ಟ್ರುವಲ್ ಸಿಂಡ್ರೋಮ್ (ಪಿಎಂಎಸ್)ನಿಂದ ಹೈರಾಣಾಗುವ ಹುಡುಗಿಯರು ಆ ಸಮಯದ ಕೈಕಾಲು ಸೆಳೆತ, ಬೆನ್ನುನೋವಿನಿಂದ ಮೊದಲೇ ಕಿರಿಕಿರಿ ಅನುಭವಿಸುತ್ತಿರುತ್ತಾರೆ. ಹೆದರಿದವನ ಮೇಲೆ ಹಲ್ಲಿ ಎಸೆದಂತೆ, ಶಾಲೆಯಲ್ಲಿ ಇಂಥ ಅವಮಾನಗಳಾದಾಗ ತಮ್ಮ ಬಗ್ಗೆಯೇ ಹೇವರಿಕೆ ಹುಟ್ಟುವ ಸಾಧ್ಯತೆಗಳೇ ಹೆಚ್ಚು.

ಲೈಂಗಿಕ ಶಿಕ್ಷಣದ ಭಾಗವಾಗಿ ಋತುಮತಿಯಾಗುವುದು, ಋತುಚಕ್ರ, ಋತುಸ್ರಾವದ ಕುರಿತು ಪಾಠಗಳನ್ನು ಮಾಡಿಸಿ, ಜಾಗೃತಿ ಮೂಡಿಸಬೇಕು ಎಂದು ಪಠ್ಯಕ್ರಮ ಹೇಳುತ್ತದೆ. ಈ ಪಾಠ ಹುಡುಗರಿಗೂ, ಹುಡುಗಿಯರಿಗೂ ಒಟ್ಟೊಟ್ಟಿಗೆ ಆಗಬೇಕು. ಪ್ರಾಕೃತಿಕವಾಗಿ ದೈಹಿಕವಾಗಿ ಭಿನ್ನವಾಗಿರುವುದನ್ನ ಅರಿತುಕೊಳ್ಳುತ್ತಾರೆ. ಋತುಚಕ್ರ ಹುಡುಗರಿಂದ ಮುಚ್ಚಿಡಬೇಕಾದ ವಿಷಯವಲ್ಲ, ಸಹಜವಾದುದು ಎಂಬುದು ಎಲ್ಲರಿಗೂ ಅರ್ಥವಾಗುತ್ತದೆ. ಆ ದಿನಗಳಲ್ಲಿ ವಿನಾಕಾರಣ ಅನುಭವಿಸುವ ಅವಮಾನಗಳಿಂದ ಈ ಪುಟ್ತಾಯಂದಿರು ಬಚಾವಾಗುತ್ತಾರೆ. ಗಂಡು ಮಕ್ಕಳಿಗೂ ಹೆಣ್ಣುಮಕ್ಕಳ ಬಗ್ಗೆ ಗೌರವ ಮೂಡುತ್ತದೆ. ಒಂದು ಮಗುವನ್ನು ಹೊರುವ, ಹೆರುವ ಗುರುತರ ಜವಾಬ್ದಾರಿಯ ಹಂತವಾಗಿರುತ್ತದೆ ಈ ಋತುಚಕ್ರ ಎಂದಾದಾಗ ತಾನಾಗಿಯೇ ಗೌರವ ಮೂಡುತ್ತದೆ.

ಪ್ರತ್ಯೇಕ ಕೂರಿಸುವುದರಿಂದ, ತಪಾಸಣೆ ಮಾಡುವುದರಿಂದ, ಮುಟ್ಟಿನ ಬಗ್ಗೆ ಮುಟ್ಟುಚಟ್ಟು ಇದ್ದಂತೆ ಮಾತಾಡುವುದರಿಂದ ಹೆಣ್ಣುಮಕ್ಕಳು ಮಾನಸಿಕವಾಗಿ ಕುಗ್ಗಿ ಹೋಗುತ್ತಾರೆ. ತಮಗೇನೋ ಅಸಹಜವಾದುದು ಆಗುತ್ತಿದೆ ಎಂಬ ಕೀಳರಿಮೆಯಲ್ಲಿ ಬದುಕಲಾರಂಭಿಸುತ್ತಾರೆ. ಇದರ ಮುಂದುವರಿದ ಭಾಗವಾಗಿಯೇ ಸ್ಯಾನಿಟರಿ ಪ್ಯಾಡುಗಳನ್ನು ಕರಿ ಚೀಲದಲ್ಲಿ ಕೊಡುವುದು, ಅದರ ಬಗ್ಗೆ ಮಾತಾಡದೇ ಇರುವುದು ನಡೆದಿದೆ.

ಸರ್ವಜ್ಞ, ಬಸವಣ್ಣ, ಅಕ್ಕ, ಕಡಕೋಳ ಮಡಿವಾಳಪ್ಪನೋರು ಮುಟ್ಟಿನ ಬಗ್ಗೆ ಆರೋಗ್ಯಕರ ವಚನಗಳನ್ನೇ ಬರೆದಿದ್ದಾರೆ. ಅವನ್ನೇ ಬಾಯಿಪಾಠ ಮಾಡಿಕೊಂಡು, ಜೀವನದಲ್ಲಿ ಅದೇ ಭಾವ ಅಳವಡಿಸಿಕೊಂಡರೆ ಈ ರಕ್ತಸ್ರಾವದ ಕುರಿತು ಗೌರವ ಮೂಡುತ್ತದೆ. ಗೌರವ ಇದ್ದಲ್ಲಿ ಕಾಳಜಿಯೂ, ಪ್ರೀತಿಯೂ ಹುಟ್ಟುತ್ತದೆ. ಪರಸ್ಪರ ಗೌರವವನ್ನೇ ಹೇಳಿಕೊಡಬೇಕಾದ ಶಾಲೆಗಳಲ್ಲಿ ದೂರ ಕೂಡಿಸುವುದು, ಪ್ರತ್ಯೇಕ ಮಾಡುವುದು, ಹೊರಗೆ ನಿಲ್ಲಿಸುವುದು ಇಂಥವುಗಳೆಲ್ಲ ಸಲ್ಲ. ಇಂಥ ಮೌಢ್ಯವನ್ನು ಬಿತ್ತುತ್ತಿರುವ ಶಿಕ್ಷಕರ ವಿರುದ್ಧ ಶಿಸ್ತಿನ ಕ್ರಮಕೈಗೊಳ್ಳಬೇಕು. ಪಠ್ಯಕ್ರಮದಲ್ಲಿ ಇರುವ ಮುಟ್ಟಿನ ಪಾಠಗಳನ್ನು ಜಾಗೃತಿಯ ಕ್ರಮಗಳಂತೆ ಪ್ರಚಾರ ನೀಡಬೇಕು. ಮುಂದಿನ ತಲೆಮಾರಿನ ತಾಯಿಯಾಗಲಿರುವ ಪುಟ್ತಾಯಂದಿರಿಗೆ ತಮ್ಮ ಬಗ್ಗೆ ಗೌರವ ಮೂಡುವಂತೆ ನಡೆದುಕೊಳ್ಳಬೇಕು.

■ ರಶ್ಮಿ ಎಸ್


ಈಶ್ವರ್